Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
ವಿಶೇಷ ಸಂಚಿಕೆ

भाग—IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1<br>No. 1<br>ಸಂಖ್ಯೆ ೧ | नई दिल्ली सोमवार, नोव्हेंबर 10, 1986<br>New Delhi Monday, November 10, 1986<br>ನವದೆಹಲಿ ಸೋಮವಾರ, ನವೆಂಬರ್ ೧೦, ೧೯೮೬ | कार्तिक 19, 1908 (शक)<br>Karthika 19, 1908 (Saka)<br>ಕಾರ್ತೀಕ ೧೯, ೧೯೦೮ (ಶಕ) | खण्ड—4<br>Vol. 4<br>ಸಂಪುಟ ೪ |


## MINISTRY OF LAW AND JUSTICE
(Legislative Department)

New Delhi, September 8, 1986/Bhadrapada 17, 1908 (Sakha)

The translations in Kannada of the following namely — (1) The Public Servants (Inquiries) Act, 1850 (2) The Caste Disabilities Removal Act, 1850 (3) The Dramatic Performances Act, 1876 (4) The Epidemic Diseases Act, 1897 (5) The Police (Incitement to Disaffection) Act, 1922 (6) The Hindu Inheritance (Removal of Disabilities) Act, 1928 (7) The Hindu Gains of Learning Act, 1930 (8) The Arya Marriage Validation Act, 1937 (9) The Employees Liability Act, 1938 (10) The Weekly Holidays Act, 1942 (11) The Foreigners Act, 1946 (12) The Representation of the People (Miscellaneous Provisions) Act, 1956 (13) The Standards of Weights and Measures Act, 1976 (14) The National Library of India Act, 1976—are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಲೋಕ ನೌಕರರ (ವಿಚಾರಣಾ) ಅಧಿನಿಯಮ, ೧೮೫೦ (೨) ಜಾತಿ ಅಸಮರ್ಥತೆಗಳನ್ನು ತೆಗೆದುಹಾಕುವ ಅಧಿನಿಯಮ, ೧೮೫೦ (೩) ನಾಟಕ ಪ್ರದರ್ಶನ ಅಧಿನಿಯಮ, ೧೮೭೬ (೪) ಸಾಂಕ್ರಾಮಿಕ ರೋಗಗಳ ಅಧಿನಿಯಮ, ೧೮೯೭ (೫) ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, ೧೯೨೨ (೬) ಹಿಂದೂ ವಾರಸು (ಅಸಮರ್ಥತಾ ನಿವಾರಣಾ) ಅಧಿನಿಯಮ, ೧೯೨೮ (೭) ಹಿಂದೂ ವಿದ್ಯಾರ್ಜಿತ ಧನ ಅಧಿನಿಯಮ, ೧೯೩೦ (೮) ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, ೧೯೩೭ (೯) ನಿಯೋಜಕ ಹೊಣೆಗಾರಿಕೆ ಅಧಿನಿಯಮ, ೧೯೩೮ (೧೦) ವಾರದ ರಜಾ ದಿನ ಅಧಿನಿಯಮ, ೧೯೪೨ (೧೧) ವಿದೇಶಿಯರ ಅಧಿನಿಯಮ, ೧೯೪೬ (೧೨) ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, ೧೯೫೬ (೧೩) ತೂಕ ಮತ್ತು ಅಳತೆ ಮಾನಕ ಅಧಿನಿಯಮ, ೧೯೭೬, (೧೪) ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, ೧೯೭೬.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ, (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಲೋಕ ನೌಕರರ (ವಿಚಾರಣಾ) ಅಧಿನಿಯಮ, 1850

**(1850ರ 37)**

[ಮೇ 1. 1984 ರಂದು ಜಾರಿಯಲ್ಲಿದ್ದಂತೆ] [1ನೇ ನವೆಂಬರ್ 1850]

**ಲೋಕ ನೌಕರರ ನಡತೆಯ ಬಗೆಗಿನ ವಿಚಾರಣೆಗಳನ್ನು ವಿನಿಯಮನಗೊಳಿಸುವುದಕ್ಕಾಗಿ**

ಸರ್ಕಾರದ ಮಂಜೂರಾತಿಯಿಲ್ಲದೆ ಯಾರನ್ನು ಅವರ ನೇಮಕಾತಿಗಳಿಂದ ತೆಗೆದುಹಾಕಲು ಸಾಧ್ಯವಿಲ್ಲವೋ ಅಂಥ ಲೋಕ ನೌಕರರ ನಡತೆಯ ಬಗೆಗಿನ ವಿಚಾರಣೆಗಳನ್ನು ವಿನಿಯಮನಗೊಳಿಸುವ ಕಾನೂನನ್ನು ತಿದ್ದುಪಡಿ ಮಾಡುವುದು ಮತ್ತು ಅದನ್ನು ಭಾರತದಾದ್ಯಂತ ಏಕರೂಪದ್ದನ್ನಾಗಿ ಮಾಡುವುದು ವಿಹಿತವಾಗಿರುವುದರಿಂದ ;

ಅವನ್ನು ಕೆಳಕಂಡಂತೆ ಅಧಿನಿಯಮಿಸಲಾಗಿದೆ :—

1. [ಅಧಿನಿಯಮಗಳ ನಿರಸನ].—ನಿರಸನಗೊಳಿಸುವ ಅಧಿನಿಯಮ, 1870ರ (1870ರ 14ರ) 1ನೇ ಪ್ರಕರಣದಿಂದ ಮತ್ತು ಅನುಸೂಚಿಯ ಭಾಗ II ರಿಂದ ನಿರಸಿತಗೊಳಿಸಲಾಗಿದೆ.

2. ಕೆಲವು ಲೋಕ ನೌಕರರ ನಡತೆಯ ಬಗ್ಗೆ ಸಾರ್ವಜನಿಕ ವಿಚಾರಣೆಯನ್ನು ನಡೆಸುವುದಕ್ಕಾಗಿ ಆರೋಪಾಂಶಗಳನ್ನು ರೂಪಿಸುವುದು.—ಸರ್ಕಾರೀ ಸೇವೆಯಲ್ಲಿರುವ ಯಾವ ವ್ಯಕ್ತಿಯನ್ನು ಅವನ ನೇಮಕಾತಿಯನ್ನು ಸರ್ಕಾರದ ಮಂಜೂರಾತಿಯಿಲ್ಲದೆ ತೆಗೆದು ಹಾಕಲು ಸಾಧ್ಯವಿಲ್ಲವೋ ಅಂಥ ಯಾವನೇ ವ್ಯಕ್ತಿಯ ದುರ್ವರ್ತನೆಯ ಯಾವುದೇ ಆರೋಪಣೆಯ ಸತ್ಯತೆಯ ಬಗ್ಗೆ ವಿಧ್ಯುಕ್ತವಾದ ಮತ್ತು ಸಾರ್ವಜನಿಕವಾದ ವಿಚಾರಣೆಯನ್ನು ನಡೆಸಲು ಸರಿಯಾದ ಆಧಾರಗಳಿವೆಯೆಂದು ಸರ್ಕಾರವು ಅಭಿಪ್ರಾಯಪಟ್ಟಾಗಲೆಲ್ಲಾ, ಅದು ಆರೋಪಣೆಗಳ ಸಾರಾಂಶವನ್ನು ಭಿನ್ನ ಭಿನ್ನ ಆರೋಪಾಂಶಗಳನ್ನಾಗಿ ಬರೆಸಬಹುದು, ಮತ್ತು ಅದರ ಸತ್ಯತೆಯ ಬಗ್ಗೆ ವಿಧ್ಯುಕ್ತವಾದ ಮತ್ತು ಸಾರ್ವಜನಿಕವಾದ ವಿಚಾರಣೆಯನ್ನು ನಡೆಸಲು ಆದೇಶಿಸಬಹುದು.

3. ವಿಚಾರಣೆಯನ್ನು ನಡೆಸಲು ಯಾವ ಪ್ರಾಧಿಕಾರಗಳಿಗೆ ಒಪ್ಪಿಸಬಹುದು; ಆಪಾದಿತರಿಗೆ ನೋಟೀಸು.—ಯಾವ ನ್ಯಾಯಾಲಯಕ್ಕೆ, ಮಂಡಲಿಗೆ ಅಥವಾ ಪ್ರಾಧಿಕಾರಕ್ಕೆ ಆಪಾದಿತ ವ್ಯಕ್ತಿಯು ಅಧೀನನಾಗಿರುವನೋ ಆ ನ್ಯಾಯಾಲಯಕ್ಕಾಗಲಿ, ಮಂಡಲಿಗಾಗಲಿ ಅಥವಾ ಪ್ರಾಧಿಕಾರಕ್ಕಾಗಲಿ ಅಥವಾ ಸರ್ಕಾರವು ಆ ಉದ್ದೇಶಕ್ಕಾಗಿ ಕಮಿಷನರುಗಳೆಂದು ವಿಶೇಷವಾಗಿ ನೇಮಿಸುವ ಇತರ ಯಾವನೇ ವ್ಯಕ್ತಿಗಾಗಲಿ ಅಥವಾ ವ್ಯಕ್ತಿಗಳಿಗಾಗಲಿ ಆ ವಿಚಾರಣೆಯನ್ನು ಒಪ್ಪಿಸಬಹುದು; ವಿಚಾರಣೆಯು ಪ್ರಾರಂಭವಾಗುವುದಕ್ಕೆ ಕಡೆಯ ಪಕ್ಷ ಹತ್ತು ದಿನಗಳಿಗೆ ಮುಂಚಿತವಾಗಿ ಆಪಾದಿತ ವ್ಯಕ್ತಿಗೆ, ಹಾಗೆ ಒಪ್ಪಿಸಿದ ಬಗ್ಗೆ, ನೋಟೀಸನ್ನು ಕೊಡತಕ್ಕದ್ದು.

4. ಸರ್ಕಾರಿ ಪ್ರಾಸಿಕ್ಯೂಷನ್ನು ನಡೆಸುವುದು.—ಪ್ರಾಸಿಕ್ಯೂಷನ್ನು ನಡೆಸುವುದು ಸೂಕ್ತವೆಂದು ಸರ್ಕಾರವು ಆಲೋಚಿಸಿದಾಗ, ತನ್ನ ಪರವಾಗಿ ಅದನ್ನು ನಡೆಸುವುದಕ್ಕಾಗಿ ಯಾವನೇ ವ್ಯಕ್ತಿಯನ್ನು ಅದು ನಾಮನಿರ್ದೇಶಿಸತಕ್ಕದ್ದು.

5. ಆಪಾದಕನು ಮಾಡಿದ ಆರೋಪವನ್ನು ಬರೆದುಕೊಳ್ಳತಕ್ಕದ್ದು ಮತ್ತು ಸತ್ಯಾಪನೆ ಮಾಡತಕ್ಕದ್ದು; ಸುಳ್ಳು ಆಪಾದನೆಗೆ ದಂಡ. ಸರ್ಕಾರವು ವಿಚಾರಣೆಯನ್ನು ಆರಂಭಿಸುವುದು :—ಆಪಾದಕನು ಆರೋಪವನ್ನು ಮಾಡಿದಾಗ, ಆ ಆಪಾದನೆಯನ್ನು ಬರಹದಲ್ಲಿ ಕೊಡುವಂತೆಯೂ ಮತ್ತು ಆಪಾದಕನು ಪ್ರಮಾಣ ವಚನದ ಅಥವಾ ಶ್ರದ್ಧಾಪೂರ್ವಕ ಧೃಢೀಕರಣದ ಮೂಲಕ ಅದನ್ನು ಸತ್ಯಾಪನೆ ಮಾಡುವಂತೆಯೂ ಸರ್ಕಾರವು ಅಗತ್ಯಪಡಿಸತಕ್ಕದ್ದು ಮತ್ತು ಅಂಥ ಪ್ರಮಾಣ ವಚನದ ಅಥವಾ ದೃಢೀಕರಣದ ಮೇಲೆ ಈ ಅಧಿನಿಯಮದ ಮೇರೆಗೆ ಯಾವುದೇ ಸುಳ್ಳು ಆಪಾದನೆಯನ್ನು ಉದ್ದೇಶಪೂರ್ವಕವಾಗಿ ಮತ್ತು ದ್ವೇಷಪೂರ್ವಕವಾಗಿ ಮಾಡುವ ಪ್ರತಿಯೊಬ್ಬ ವ್ಯಕ್ತಿಯೂ, ಸುಳ್ಳು ಸಾಕ್ಷ್ಯದ ಬಗೆಗಿನ ದಂಡಗಳಿಗೆ ಗುರಿಯಾಗತಕ್ಕದ್ದು ; ಆದರೆ ಮೇಲೆ ಹೇಳಿದಂತೆ ಪ್ರಮಾಣ ವಚನದ ಅಥವಾ ಶ್ರದ್ಧಾಪೂರ್ವಕ ದೃಢೀಕರಣದ ಮೇಲೆ ಅಂಥ ಆಪಾದನೆ ಇಲ್ಲದೆ ತಾನು ಸೂಕ್ತವೆಂದು ಆಲೋಚಿಸತಕ್ಕ ಯಾವುದೇ ವಿಚಾರಣೆಯನ್ನು ಹೂಡದಂತೆ ಸರ್ಕಾರವನ್ನು ಈ ಅಧಿನಿಯಮವು ಪ್ರತಿಬಂಧಿಸುವುದೆಂದು ಅರ್ಥೈಸತಕ್ಕದ್ದಲ್ಲ.

6. ಆಪಾದಕನು ಪ್ರಾಸಿಕ್ಯೂಷನನ್ನು ಹೂಡಲು ಸರ್ಕಾರವು ಅನುಮತಿಸಿದಾಗ ಅವನಿಂದ ಭದ್ರತೆ :—ಆಪಾದಕನು ಆರೋಪವನ್ನು ಮಾಡಿರುವಲ್ಲಿ ಮತ್ತು ಪ್ರಾಸಿಕ್ಯೂಷನ್ ನಡೆಸುವುದನ್ನು ಅವನಿಗೆ ಬಿಟ್ಟು ಬಿಡುವುದು ಸೂಕ್ತವೆಂದು ಸರ್ಕಾರವು ಆಲೋಚಿಸಿದಲ್ಲಿ, ಕಮಿಷನನ್ನು ನೇಮಿಸುವುದಕ್ಕೆ ಮುಂಚೆ ಆಪಾದಕನು ಹಾಜರಾಗುವ ಬಗ್ಗೆ ಮತ್ತು ಆರೋಪದ ಬಗ್ಗೆ ಪ್ರಾಸಿಕ್ಯೂಷನನ್ನು ಪರಿಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸುವ ಬಗ್ಗೆ, ಮತ್ತು ಸಂದರ್ಭಾನುಸಾರ, ದ್ವೇಷಪೂರ್ವಕ ಪ್ರಾಸಿಕ್ಯೂಷನ್‌ಗಾಗಿ ಅಥವಾ ಸುಳ್ಳು ಸಾಕ್ಷ್ಯಕ್ಕಾಗಿ ಅಥವಾ ಸುಳ್ಳು ಸಾಕ್ಷ್ಯದ ಪ್ರೇರೇಪಣೆಗಾಗಿ ಅವನ ವಿರುದ್ಧವಾಗಿ ಅನಂತರ ತರಬಹುದಾದ ಯಾವುದೇ ಪ್ರತ್ಯಾರೋಪಕ್ಕೆ ಅಥವಾ ಕ್ರಮಕ್ಕೆ ಉತ್ತರ ಕೊಡಲು ಮುಂದೆ ಬರುವ ಬಗ್ಗೆ ಸಹ, ಯುಕ್ತ ಭದ್ರತೆಯನ್ನು ಒದಗಿಸಲು ಸರ್ಕಾರವು ಅವನನ್ನು ಅಗತ್ಯಪಡಿಸತಕ್ಕದ್ದು.

7. ಪ್ರಾಸಿಕ್ಯೂಷನನ್ನು ಬಿಟ್ಟುಬಿಡಲು ಮತ್ತು ಅದನ್ನು ಮುಂದುವರಿಸಲು ಆಪಾದಕನಿಗೆ ಅವಕಾಶ ಕೊಡಲು ಸರ್ಕಾರಕ್ಕಿರುವ ಅಧಿಕಾರ :—ವ್ಯವಹರಣೆಗಳ ಯಾವುದೇ ತರುವಾಯದ ಹಂತದಲ್ಲಿ, ಸರ್ಕಾರವು ತಾನು ಸೂಕ್ತವೆಂದು ಆಲೋಚಿಸಿದರೆ, ಪ್ರಾಸಿಕ್ಯೂಷನನ್ನು ಬಿಟ್ಟುಬಿಡಬಹುದು, ಮತ್ತು ಅಂಥ ಸಂದರ್ಭದಲ್ಲಿ, ಆಪಾದಕನ ಅರ್ಜಿಯ ಮೇಲೆ ಅವನು ಹಾಗೆ ಮಾಡಲು ಇಚ್ಛಿಸಿದರೆ, ಈ ಮುಂಚೆ ನಮೂದಿಸಲಾದ ಭದ್ರತೆಯನ್ನು ಅವನು ಒದಗಿಸಿದ ಮೇಲೆ, ತಾನು ಸೂಕ್ತವೆಂದು ಆಲೋಚಿಸಿದರೆ, ಪ್ರಾಸಿಕ್ಯೂಷನನ್ನು ಮುಂದುವರಿಸಲು ಅವನಿಗೆ ಅವಕಾಶವನ್ನು ಕೊಡಬಹುದು.

8. ಕಮಿಷನರರ ಅಧಿಕಾರಗಳು; ಅವರಿಗೆ ಸಂರಕ್ಷಣೆ; ಅವರ ಆದೇಶಿಕೆಯ ಜಾರಿ; ಕಮಿಷನ್ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಲಯದ ಅಧಿಕಾರಗಳು, ಇತ್ಯಾದಿ :—ಕಮಿಷನರರು, ತಮ್ಮ ವ್ಯವಹರಣೆಗಳ ಬಗೆಗಿನ ನಿಂದನೆ ಮತ್ತು ಅಡ್ಡಿಗಳ ಬಗ್ಗೆ ದಂಡಿಸುವುದಕ್ಕಾಗಿ ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ ಮೂಲಕ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳಿಗೆ ಕೊಟ್ಟಿರುವಂಥದೇ ಅಧಿಕಾರವನ್ನು ಹೊಂದಿರತಕ್ಕದ್ದು, ಮತ್ತು ಸಾಕ್ಷಿಗಳನ್ನು ಸಮನು ಮಾಡುವ ಬಗ್ಗೆ, ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಒತ್ತಾಯ ಪಡಿಸುವ ಬಗ್ಗೆ, ಮತ್ತು ಕಮಿಷನ್ನಿನ ಮೇರೆಗಿನ ತಮ್ಮ ಕರ್ತವ್ಯವನ್ನು ನಿರ್ವಹಿಸುವ ಬಗ್ಗೆ ಅಂಥವೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಮತ್ತು ಸಾಕ್ಷಿಗಳನ್ನು

ಹಾಜರುಪಡಿಸುವಂತೆ ಮಾಡುವ ಎಲ್ಲ ಆದೇಶಿಕೆಯನ್ನು ಮತ್ತು ಇತರ ಕಡ್ಡಾಯ ಆದೇಶಿಕೆಯನ್ನು, ಯಾರ ಮೇಲೆ ಆ ಆದೇಶಿಕೆಯನ್ನು ಜಾರಿ ಮಾಡಬೇಕಾಗಿದೆಯೋ ಆ ಸಾಕ್ಷಿದಾರನು ಅಥವಾ ಇತರ ವ್ಯಕ್ತಿಯು ಯಾವ ಜಿಲ್ಲಾ ಅಥವಾ ನಗರ ನ್ಯಾಯಾಧೀಶನ ಅಧಿಕಾರವ್ಯಾಪ್ತಿಯೊಳಗೆ ವಾಸಿಸುತ್ತಿರುವನೋ, ಆ ಜಿಲ್ಲಾ ಅಥವಾ ನಗರ ನ್ಯಾಯಾಧೀಶನ ಮೂಲಕ ಮಾತ್ರ ಆ ನ್ಯಾಯಾಧೀಶನಿಂದ, ಮತ್ತು ಅವನು ಕಲ್ಕತ್ತೆ, ಮದ್ರಾಸು ಅಥವಾ ಬೊಂಬಾಯಿಯಲ್ಲಿ ವಾಸಿಸುತ್ತಿದ್ದರೆ, ಆಗ ಅದಕ್ಕೆ ಸಂಬಂಧಿಸಿದ ಸರ್ವೋಚ್ಚ ನ್ಯಾಯಾಲಯದ ಮೂಲಕ ಅದನ್ನು ಜಾರಿ ಮಾಡತಕ್ಕದೆಂಬುದನ್ನು ಮತ್ತು ಅಮಲ್ಜಾರಿಗೊಳಿಸತಕ್ಕದೆಂಬುದನ್ನು ಹೊರತುಪಡಿಸಿ, ಜಿಲ್ಲಾ ಮತ್ತು ನಗರ ನ್ಯಾಯಾಧೀಶರಿಗೆ ಇರುವಂಥದೇ ಸಂರಕ್ಷಣೆಗೆ ಹಕ್ಕುಳ್ಳವರಾಗಿರತಕ್ಕದು. ತಮ್ಮ ಸಾಮಾನ್ಯ ಅಧಿಕಾರವನ್ನು ಚಲಾಯಿಸುವಲ್ಲಿ ಅಂಥ ಆದೇಶಿಕೆಯನ್ನು ಹೊರಡಿಸಲು ಅಧಿಕಾರವನ್ನು ಹೊಂದಿರುವ ನ್ಯಾಯಾಲಯಕ್ಕೆ, ಇತರ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಕಮಿಷನನ್ನು ಹೊರಡಿಸಿದಾಗ, ಅವರೂ ಸಹ ಕಮಿಷನ್ನಿನ ಉದ್ದೇಶಗಳಿಗಾಗಿ ಅಂಥ ಎಲ್ಲ ಅಧಿಕಾರವನ್ನು ಉಪಯೋಗಿಸಬಹುದು.

9. ಆದೇಶಿಕೆಯ ಅನನುಪಾಲನೆಗಾಗಿ ದಂಡ:—ಕಮಿಷನ್ನಿನ ಉದ್ದೇಶಗಳಿಗಾಗಿ ಮೇಲೆ ಹೇಳಿದಂತೆ ಹೊರಡಿಸಲಾದ ಯಾವುದೇ ಕಾನೂನುಬದ್ಧ ಆದೇಶಿಕೆಯನ್ನು ಅನನುಪಾಲಿಸುವ ಎಲ್ಲ ವ್ಯಕ್ತಿಗಳು, ಯಾವ ನ್ಯಾಯಾಲಯದಿಂದ ಅಥವಾ ಯಾರ ಮುಖಾಂತರವಾಗಿ ಅದನ್ನು ಜಾರಿಗೊಳಿಸಲಾಗುತ್ತಿದೆಯೋ ಆ ನ್ಯಾಯಾಲಯವು ಅಥವಾ ಇತರ ಪ್ರಾಧಿಕಾರವು ಮೂಲತ: ಅದನ್ನು ಹೊರಡಿಸಿದ್ದರೆ ಹೇಗೋ ಹಾಗೆ, ಅವೇ ದಂಡನೆಗಳಿಗೆ ಗುರಿಯಾಗತಕ್ಕದು.

10. ಆರೋಪದ ಪ್ರತಿಯನ್ನು ಮತ್ತು ಪಟ್ಟಿಯನ್ನು ಆಪಾದಿತನಿಗೆ ಒದಗಿಸತಕ್ಕದು.—ಆರೋಪಾಂಶಗಳ ಪ್ರತಿಯನ್ನು ಮತ್ತು ಯಾವುದರಿಂದ ಪ್ರತಿಯೊಂದು ಆರೋಪವನ್ನು ಸಮರ್ಥಿಸಲಾಗುತ್ತಿದೆಯೋ, ಆ ದಸ್ತಾವೇಜುಗಳ ಮತ್ತು ಸಾಕ್ಷಿದಾರಪಟ್ಟಿಯನ್ನು, ಅವುಗಳನ್ನು ಕೊಡುವ ದಿನವನ್ನು ಮತ್ತು ವಿಚಾರಣೆಯು ಪ್ರಾರಂಭವಾಗುವ ದಿನವನ್ನು ಬಿಟ್ಟು, ವಿಚಾರಣೆಯು ಪ್ರಾರಂಭವಾಗುವುದಕ್ಕೆ ಕೊನೆಯ ಪಕ್ಷ ಮೂರು ದಿನಗಳಿಗೆ ಮುಂಚಿತವಾಗಿ, ಆಪಾದಿತ ವ್ಯಕ್ತಿಗೆ ಕೊಡತಕ್ಕದು.

11. ವಿಚಾರಣೆಯ ಪ್ರಾರಂಭದಲ್ಲಿನ ಪ್ರಕ್ರಿಯೆ; ಆಪಾದಿತನು ಹಾಜರಾಗದೆ ಇರುವುದು ಮತ್ತು ಆರೋಪವನ್ನು ಒಪ್ಪಿಕೊಳ್ಳುವುದು:—ವಿಚಾರಣೆಯ ಪ್ರಾರಂಭದಲ್ಲಿ ಪ್ರಾಸಿಕ್ಯೂಟರನು ಆರೋಪಾಂಶಗಳನ್ನು ಕಮಿಷನರಿಗೆ ತೋರಿಸತಕ್ಕದು, ಮತ್ತು ಅದನ್ನು ಬಹಿರಂಗವಾಗಿ ಓದತಕ್ಕದು ಹಾಗೂ ಆಮೇಲೆ ಆಪಾದಿತ ವ್ಯಕ್ತಿಯು ಅವುಗಳಲ್ಲಿ ಪ್ರತಿಯೊಂದರ ಬಗ್ಗೆ ತಾನು "ತಪ್ಪಿತಸ್ಥನೆಂದು" ಅಥವಾ "ತಪ್ಪಿತಸ್ಥನಲ್ಲ" ವೆಂದು ವಾದಿಸಲು ಅಗತ್ಯಪಡಿಸತಕ್ಕದು, ಮತ್ತು ಆ ವಾದಗಳನ್ನು ಆರೋಪಾಂಶಗಳ ಜತೆಗೆ ತತ್‌ಕ್ಷಣವೇ ಅಭಿಲೇಖಿಸತಕ್ಕದು. ಆಪಾದಿತವ್ಯಕ್ತಿಯು ಸ್ವತಃ ತಾನಾಗಲಿ ಅಥವಾ ತನ್ನ ಕೌನ್ಸಿಲ್ಲನ ಅಥವಾ ಏಜೆಂಟನ ಮುಖಾಂತರವಾಗಲಿ ಆರೋಪಕ್ಕೆ ಉತ್ತರಿಸುವುದಕ್ಕಾಗಿ, ಹಾಜರಾಗಲು ಇನ್‌ಕಾರ ಮಾಡಿದರೆ, ಅಥವಾ ಯುಕ್ತ ಕಾರಣವಿಲ್ಲದೆ ನಿರ್ಲಕ್ಷಿಸಿದರೆ, ಅವನು ಆರೋಪಾಂಶಗಳ ಸತ್ಯತೆಯನ್ನು ಒಪ್ಪಿಕೊಂಡಿದ್ದಾನೆಂದು ತಿಳಿಯತಕ್ಕದು.

12. ಸಂಬೋಧಿಸುವುದಕ್ಕೆ ಪ್ರಾಸಿಕ್ಯೂಟರನಿಗೆ ಇರುವ ಹಕ್ಕು:—ಆಮೇಲೆ ಆರೋಪಾಂಶಗಳನ್ನು ಮತ್ತು ಯಾವ ಸಾಕ್ಷ್ಯದ ಮೂಲಕ ಅವುಗಳ ಬಗ್ಗೆ ರುಜುವಾತುಪಡಿಸಬೇಕಾಗಿದೆಯೋ ಆ ಸಾಕ್ಷ್ಯವನ್ನು ವಿವರಿಸುವುದಕ್ಕಾಗಿ ಪ್ರಾಸಿಕ್ಯೂಟರನು ಕಮಿಷನರರನ್ನು ಸಂಬೋಧಿಸಲು ಹಕ್ಕುಳ್ಳವನಾಗಿರತಕ್ಕದು ಅವನು ಹಾಗೆ ಸಂಬೋಧಿಸಿದ್ದನ್ನು ಅಭಿಲೇಖಿಸತಕ್ಕದಲ್ಲ.

13. ಪ್ರಾಸಿಕ್ಯೂಷನ್ನಿಗಾಗಿ ಸಾಕ್ಷ್ಯದ ಮತ್ತು ಸಾಕ್ಷಿದಾರರ ಪರೀಕ್ಷೆ; ಪ್ರಾಸಿಕ್ಯೂಟರನಿಂದ ಮರು ಪರೀಕ್ಷೆ:—ಆಮೇಲೆ ಪ್ರಾಸಿಕ್ಯೂಷನ್ನಿನ ಪರವಾದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಹಾಜರುಪಡಿಸತಕ್ಕದು, ಪ್ರಾಸಿಕ್ಯೂಟರನು ಅಥವಾ ಅವನ ಪರವಾಗಿ ಸಾಕ್ಷಿದಾರರನ್ನು ಪರೀಕ್ಷಿಸತಕ್ಕದು ಮತ್ತು ಆಪಾದಿತ ವ್ಯಕ್ತಿಯು ಅಥವಾ ಅವನ ಪರವಾಗಿ ಪಾಟೀ ಸವಾಲನ್ನು ಮಾಡಬಹುದು. ಸಾಕ್ಷಿದಾರರನ್ನು ಯಾವ ಅಂಶಗಳ ಮೇಲೆ ಪಾಟೀ ಸವಾಲು ಮಾಡಲಾಗಿದೆಯೋ, ಆ ಯಾವುವೇ ಅಂಶಗಳ ಬಗ್ಗೆ ಅವರನ್ನು ಮರುಪರೀಕ್ಷಿಸಲು ಪ್ರಾಸಿಕ್ಯೂಟರನು ಹಕ್ಕುಳ್ಳವನಾಗಿರತಕ್ಕದು; ಆದರೆ ಕಮಿಷನರರ ಅನುಮತಿಯಿಲ್ಲದೆ ಯಾವುದೇ ಹೊಸ ವಿಷಯದ ಬಗ್ಗೆ ಮರು ಪರೀಕ್ಷಿಸಲಾಗದು ಮತ್ತು ಕಮಿಷನರರು ಸಹ ತಾವು ಸೂಕ್ತವೆಂದು ಆಲೋಚಿಸುವಂಥ ಪ್ರಶ್ನೆಗಳನ್ನು ಕೇಳಬಹುದು.

14. ಪ್ರಾಸಿಕ್ಯೂಷನ್ನಿಗೋಸ್ಕರ ಹೊಸ ಸಾಕ್ಷ್ಯವನ್ನು ಅಂಗೀಕರಿಸುವ ಅಥವಾ ತರಿಸಿಕೊಳ್ಳುವ ಅಧಿಕಾರ ಮುಂದಕ್ಕೆ ಹಾಕಿಸಿಕೊಳ್ಳುವ ಬಗ್ಗೆ ಆಪಾದಿತನಿಗಿರುವ ಹಕ್ಕು:—ಪ್ರಾಸಿಕ್ಯೂಷನ್ನಿನ ಪರವಾಗಿ ಮೊಕದ್ದಮೆಯನ್ನು ಮುಗಿಸುವ ಮುಂಚೆ ಅವಶ್ಯವೆಂದು ಕಂಡು ಬಂದಲ್ಲಿ, ಆಪಾದಿತವ್ಯಕ್ತಿಗೆ ಕೊಡಲಾದ ಪಟ್ಟಿಯಲ್ಲಿ ಸೇರಿಸದಿರುವ ಸಾಕ್ಷ್ಯವನ್ನು ಪ್ರದರ್ಶಿಸಲು ಕಮಿಷನರರು ತಮ್ಮ ವಿವೇಚನಾನುಸಾರ, ಪ್ರಾಸಿಕ್ಯೂಟರನಿಗೆ ಅನುಮತಿಯನ್ನು ಕೊಡಬಹುದು, ಅಥವಾ ತಾವೇ ಹೊಸ ಸಾಕ್ಷ್ಯವನ್ನು ತರಿಸಿಕೊಳ್ಳಬಹುದು; ಮತ್ತು ಇಂಥ ಸಂದರ್ಭದಲ್ಲಿ ಆಪಾದಿತ ವ್ಯಕ್ತಿಯು, ಅವನು ಮಾಗಣಿ ಮಾಡಿದರೆ, ಅಂಥ ಹೊಸ ಸಾಕ್ಷ್ಯವನ್ನು ಪ್ರದರ್ಶಿಸುವುದಕ್ಕಿಂತ ಮುಂಚೆ, ಮುಂದಕ್ಕೆ ಹಾಕಲಾದ ದಿನವನ್ನು ಮತ್ತು ಯಾವ ದಿನಕ್ಕೆ ವ್ಯವಹಾರಣೆಗಳನ್ನು ಮುಂದಕ್ಕೆ ಹಾಕಲಾಗಿದೆಯೋ ಆ ದಿನವನ್ನು ಬಿಟ್ಟು ಸ್ಪಷ್ಟ ಮೂರು ದಿವಸಗಳವರೆಗೆ ವ್ಯವಹರಣೆಗಳನ್ನು ಮುಂದಕ್ಕೆ ಹಾಕಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದು.

15. ಆಪಾದಿತನ ಪ್ರತಿ ರಕ್ಷಣೆ; ಲಿಖಿತದಲ್ಲಿದ್ದಾಗ ಮಾತ್ರ ಅಭಿಲೇಖಿಸತಕ್ಕದು:—ಪ್ರಾಸಿಕ್ಯೂಷನ್ನಿನ ಪರವಾಗಿ ಮೊಕದ್ದಮೆಯು ಮುಗಿದಾಗ, ಆಪಾದಿತ ವ್ಯಕ್ತಿಯು ಅವನು ಇಚ್ಛಿಸುವ ರೀತಿಯಲ್ಲಿ, ಮೌಖಿಕವಾಗಿ ಅಥವಾ ಲಿಖಿತದಲ್ಲಿ ತನ್ನ ಪ್ರತಿ ರಕ್ಷಣೆಯನ್ನು ಮಾಡಿಕೊಳ್ಳುವುದು ಅಗತ್ಯವಾಗಿರತಕ್ಕದು. ಮೌಖಿಕವಾಗಿ ಮಾಡಿಕೊಂಡರೆ ಅದನ್ನು ಅಭಿಲೇಖಿಸತಕ್ಕದಲ್ಲ; ಲಿಖಿತದಲ್ಲಿ ಮಾಡಿಕೊಂಡರೆ ಅದನ್ನು ಬಹಿರಂಗವಾಗಿ ಓದಿದ ಅನಂತರ ಅಭಿಲೇಖಿಸಿಕೊಳ್ಳತಕ್ಕದು, ಮತ್ತು ಆ ಸಂದರ್ಭದಲ್ಲಿ ಪ್ರಾಸಿಕ್ಯೂಟರನಿಗೆ ಅದೇ ಕಾಲದಲ್ಲಿ ಅದರ ಪ್ರತಿಯನ್ನು ಕೊಡತಕ್ಕದು.

16. ಪ್ರತಿ ರಕ್ಷಣೆಯ ಬಗ್ಗೆ ಸಾಕ್ಷ್ಯ ಮತ್ತು ಸಾಕ್ಷಿದಾರರ ಪರೀಕ್ಷೆ:—ಆ ತರುವಾಯ ಪ್ರತಿರಕ್ಷಣೆಯ ಬಗೆಗಿನ ಸಾಕ್ಷ್ಯವನ್ನು ಪ್ರದರ್ಶಿಸತಕ್ಕದು ಮತ್ತು ಸಾಕ್ಷಿದಾರರನ್ನು ಪರೀಕ್ಷಿಸತಕ್ಕದು; ಪ್ರಾಸಿಕ್ಯೂಷನ್‌ನಿನ ಪರವಾದ ಸಾಕ್ಷಿದಾರರ ಬಗ್ಗೆ ಇರುವ ನಿಯಮಗಳಂತೆಯೇ, ಪಾಟೀಸವಾಲಿಗೆ ಮತ್ತು ಮರುಪರೀಕ್ಷೆಗೆ ಹಾಗೂ ಕಮಿಷನರರ ಪರೀಕ್ಷೆಗೆ ಅವರು ಗುರಿಯಾಗಿರತಕ್ಕದು.

17. [ಸಾಕ್ಷಿದಾರರನ್ನು ಪರೀಕ್ಷಿಸುವುದು ಮತ್ತು ಪ್ರಾಸಿಕ್ಯೂಟರ ಮೂಲಕ ಸಾಕ್ಷ್ಯ]:—ನಿರಸನಗೊಳಿಸುವ ಅಧಿನಿಯಮ, 1876ರ (1876ರ 12) 2ನೇ ಪ್ರಕರಣದ ಮತ್ತು ಅನುಸೂಚಿಯ ಭಾಗ—1ರ ಮೂಲಕ ನಿರಸಿತವಾಗಿದೆ.

18. ಮೌಖಿಕ ಸಾಕ್ಷ್ಯದ ಟಿಪ್ಪಣಿಗಳು:—ಕಮಿಷನರರು ಅಥವಾ ಅವರಿಂದ ನೇಮಿತನಾದ ಯಾವನಾದರೂ ವ್ಯಕ್ತಿಯು ಎಲ್ಲ ಮೌಖಿಕ ಸಾಕ್ಷ್ಯದ ಟಿಪ್ಪಣಿಗಳನ್ನು ಇಂಗ್ಲೀಷಿನಲ್ಲಿ ಬರೆದುಕೊಳ್ಳತಕ್ಕದು ಮತ್ತು ಯಾರು ಆ ಸಾಕ್ಷ್ಯವನ್ನು ಕೊಟ್ಟರೋ ಆ ಪ್ರತಿಯೊಬ್ಬ ಸಾಕ್ಷಿದಾರನಿಗೆ ಅದನ್ನು ಗಟ್ಟಿಯಾಗಿ ಓದಿ ಹೇಳತಕ್ಕದು, ಮತ್ತು ಅವಶ್ಯವಾದಲ್ಲಿ, ಅದನ್ನು ಯಾವ ಭಾಷೆಯಲ್ಲಿ ಕೊಡಲಾಗಿದೆಯೋ ಆ ಭಾಷೆಯಲ್ಲಿ, ಅವನಿಗೆ ವಿವರಿಸತಕ್ಕದು, ಮತ್ತು ವ್ಯವಹರಣೆಗಳ ಜೊತೆಯಲ್ಲಿ ಅದನ್ನು ಅಭಿಲೇಖಿಸತಕ್ಕದು.

19. ಪ್ರತಿ ರಕ್ಷಣೆಯೊಂದಿಗೆ ವಿಚಾರಣೆಯು ಯಾವಾಗ ಮುಗಿಯುತ್ತದೆ; ಪ್ರಾಸಿಕ್ಯೂಟರನು ಯಾವಾಗ ಉತ್ತರ ಕೊಡಲು ಮತ್ತು ಸಾಕ್ಷ್ಯವನ್ನು ಕೊಡಲು ಹಕ್ಕುಳ್ಳವನಾಗಿರುತ್ತಾನೆ; ಮುಂದಕ್ಕೆ ಹಾಕಿಸಲು ಆಪಾದಿತನು ಹಕ್ಕುಳ್ಳವನಾಗಿರುವುದಿಲ್ಲ :—ಆಪಾದಿತ ವ್ಯಕ್ತಿಯು ಕೇವಲ ಮೌಖಿಕ ಪ್ರತಿರಕ್ಷಣೆಯನ್ನು ಮಾಡಿಕೊಂಡರೆ, ಮತ್ತು ಯಾವ ಸಾಕ್ಷ್ಯವನ್ನೂ ಪ್ರದರ್ಶಿಸದಿದ್ದರೆ, ಅವನ ಪ್ರತಿರಕ್ಷಣೆಯೊಂದಿಗೆ ವಿಚಾರಣೆಯು ಮುಕ್ತಾಯಗೊಳ್ಳತಕ್ಕದ್ದು, ಅವನು ಲಿಖಿತ ರಕ್ಷಣೆಯನ್ನು ದಾಖಲು ಮಾಡಿದರೆ, ಅಥವಾ ಸಾಕ್ಷ್ಯವನ್ನು ಪ್ರದರ್ಶಿಸಿದರೆ, ಇಡೀ ಮೊಕದ್ದಮೆಯ ಬಗ್ಗೆ ಸಾಮಾನ್ಯ ಮೌಖಿಕ ಉತ್ತರವನ್ನು ಕೊಡಲು ಪ್ರಾಸಿಕ್ಯೂಟರನು ಹಕ್ಕುಳ್ಳವನಾಗಿರತಕ್ಕದ್ದು, ಮತ್ತು ಪ್ರತಿರಕ್ಷಣೆಗಾಗಿ ಪ್ರದರ್ಶಿಸಲಾದ ಯಾವುದೇ ಸಾಕ್ಷ್ಯವನ್ನು ವಿರೋಧಿಸಲು ಸಾಕ್ಷ್ಯವನ್ನೂ ಸಹ ಪ್ರದರ್ಶಿಸಬಹುದು, ಅಂಥ ಸಂದರ್ಭದಲ್ಲಿ ಆಪಾದಿತ ವ್ಯಕ್ತಿಯು, ಅವನಿಗೆ ಒದಗಿಸಿದ ಪಟ್ಟಿಯಲ್ಲಿ ಅಂಥ ಹೊಸ ಸಾಕ್ಷ್ಯವನ್ನು ಸೇರಿಸಿರದಿದ್ದರೂ, ವ್ಯವಹರಣೆಗಳನ್ನು ಮುಂದಕ್ಕೆ ಹಾಕಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

20. ಆರೋಪವನ್ನು ದುರಸ್ತು ಮಾಡುವುದನ್ನು ಅಗತ್ಯಪಡಿಸುವುದಕ್ಕೆ ಮತ್ತು ಮುಂದಕ್ಕೆ ಹಾಕುವುದಕ್ಕೆ ಅಧಿಕಾರ; ಮುಂದಕ್ಕೆ ಹಾಕುವುದನ್ನು ಇನ್‌ಕಾರ ಮಾಡುವುದರ ಕಾರಣವನ್ನು ಅಭಿಲೇಖಿಸತಕ್ಕದ್ದು :—ಆರೋಪಾಂಶಗಳನ್ನು ಅಥವಾ ಅದರಲ್ಲಿನ ಯಾವುದನ್ನಾದರೂ, ಸಾಕಷ್ಟು ಸ್ಪಷ್ಟವಾಗಿ ಮತ್ತು ಖಚಿತವಾಗಿ ರೂಪಿಸಿಲ್ಲವೆಂದು ಕಮಿಷನರರು ಅಭಿಪ್ರಾಯಪಟ್ಟಾಗ, ಅವರು, ತಮ್ಮ ವಿವೇಚನಾನುಸಾರ, ಅದನ್ನು ದುರಸ್ತು ಮಾಡುವಂತೆ ಅಗತ್ಯಪಡಿಸಬಹುದು, ಮತ್ತು ತದನಂತರ, ಆಪಾದಿತ ವ್ಯಕ್ತಿಯ ಅರ್ಜಿಯ ಮೇಲೆ, ಸೂಕ್ತ ಕಾಲದವರೆಗೆ ವಿಚಾರಣೆಯನ್ನು ಮುಂದಕ್ಕೆ ಹಾಕಬಹುದು. ಯಾವನೇ ಸಾಕ್ಷಿದಾರನ ಅನಾರೋಗ್ಯದ ಅಥವಾ ಅನಿವಾರ್ಯ ಗೈರುಹಾಜರಿಯ ಅಥವಾ ಇತರ ಸೂಕ್ತ ಕಾರಣದ ಆಧಾರದ ಮೇಲೆ ಪ್ರಾಸಿಕ್ಯೂಟರನಾಗಲಿ ಅಥವಾ ಆಪಾದಿತ ವ್ಯಕ್ತಿಯಾಗಲಿ ಸಲ್ಲಿಸಿದ ಅರ್ಜಿಯ ಮೇಲೆ, ಕಮಿಷನರರು, ತಾವು ಸೂಕ್ತವೆಂದು ಆಲೋಚಿಸಿದರೆ, ವಿಚಾರಣೆಯನ್ನು ಕಾಲಕಾಲಕ್ಕೆ ಮುಂದಕ್ಕೆ ಹಾಕಬಹುದು. ಅಂಥ ಅರ್ಜಿಯನ್ನು ಸಲ್ಲಿಸಿದಾಗ ಮತ್ತು ಅದನ್ನು ಇನ್‌ಕಾರ ಮಾಡಿದಾಗ, ಕಮಿಷನರರು ಆ ಅರ್ಜಿಯನ್ನು ಮತ್ತು ಅದನ್ನು ಈಡೇರಿಸಲು ಇನ್‌ಕಾರ ಮಾಡಿದುದರ ತಮ್ಮ ಕಾರಣಗಳನ್ನು ಅಭಿಲೇಖಿಸತಕ್ಕದ್ದು.

21. ಕಮಿಷನರರ ವ್ಯವಹರಣೆಗಳ ವರದಿ :—ವಿಚಾರಣೆಯು ಮುಕ್ತಾಯವಾದ ಅನಂತರ ಕಮಿಷನರರು ಕಮಿಷನ್ನಿನ ಮೇರೆಗೆ ತಾವು ಕೈಕೊಂಡ ವ್ಯವಹರಣೆಗಳನ್ನು ತತ್‌ಕ್ಷಣವೇ ಸರ್ಕಾರಕ್ಕೆ ವರದಿ ಮಾಡತಕ್ಕದ್ದು, ಮತ್ತು ಅದರ ದಾಖಲೆಯ ಜೊತೆಗೆ ಆರೋಪಾಂಶಗಳಲ್ಲಿ ಪ್ರತಿಯೊಂದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಪ್ರತ್ಯೇಕವಾಗಿ, ಮತ್ತು ಇಡೀ ಮೊಕದ್ದಮೆಯ ಬಗ್ಗೆ ತಾವು ಸೂಕ್ತವೆಂದು ಆಲೋಚಿಸುವಂಥ ಅಭಿಪ್ರಾಯಗಳ ಸಹಿತವಾಗಿ ಕಳುಹಿಸತಕ್ಕದ್ದು.

22. ಇನ್ನೂ ಹೆಚ್ಚಿನ ಸಾಕ್ಷ್ಯವನ್ನು ಅಥವಾ ಸ್ಪಷ್ಟೀಕರಣವನ್ನು ತರಿಸಿಕೊಳ್ಳುವ ಅಧಿಕಾರ, ಹೆಚ್ಚಿನ ಆರೋಪಾಂಶಗಳ ಬಗ್ಗೆ ವಿಚಾರಣೆ; ವಿಶೇಷ ಕಮಿಷನರರ ಅಂತಿಮ ಆದೇಶಗಳ ವರದಿಯನ್ನು ಕಳಿಸಿ ಕೊಡುವುದು :—ಕಮಿಷನರರ ವರದಿಯನ್ನು ಪರ್ಯಾಲೋಚಿಸಿದ ಮೇಲೆ ಅವರು ಇನ್ನೂ ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಳ್ಳಬೇಕೆಂದು, ಅಥವಾ ತಮ್ಮ ಅಭಿಪ್ರಾಯಗಳ ಬಗ್ಗೆ ಇನ್ನೂ ಹೆಚ್ಚಿನ ಸ್ಪಷ್ಟೀಕರಣವನ್ನು ಕೊಡಬೇಕೆಂದು ಸರ್ಕಾರವು ಆದೇಶಿಸಬಹುದು. ಹೆಚ್ಚಿನ ಆರೋಪಾಂಶಗಳನ್ನು ರೂಪಿಸಬೇಕೆಂದು ಸಹ ಅದು ಆದೇಶವನ್ನು ಮಾಡಬಹುದು, ಮತ್ತು ಅಂಥ ಸಂದರ್ಭದಲ್ಲಿ ಅಂಥ ಹೆಚ್ಚಿನ ಅಂಶಗಳ ಸತ್ಯತೆಯ ವಿಚಾರಣೆಯನ್ನು, ಮೂಲ ಆರೋಪಗಳಿಗೆ ಸಂಬಂಧಿಸಿ ಇದರಲ್ಲಿ ಈ ಮುಂಚೆ ನಿರ್ದೇಶಿಸಿದ ರೀತಿಯಲ್ಲಿಯೇ ಮಾಡತಕ್ಕದ್ದು. ವಿಶೇಷ ಕಮಿಷನರರನ್ನು ನೇಮಿಸಿದಾಗ, ಸರ್ಕಾರವು ತಾನು ಸೂಕ್ತವೆಂದು ಆಲೋಚಿಸಿದರೆ, ಯಾವ ನ್ಯಾಯಾಲಯಕ್ಕೆ ಅಥವಾ ಇತರ ಪ್ರಾಧಿಕಾರಕ್ಕೆ ಆಪಾದಿತ ವ್ಯಕ್ತಿಯು ಅಧೀನನಾಗಿರುವನೋ ಆ ನ್ಯಾಯಾಲಯಕ್ಕೆ ಅಥವಾ ಇತರ ಪ್ರಾಧಿಕಾರಕ್ಕೆ ಮೊಕದ್ದಮೆಯ ಬಗೆಗಿನ ಅವರ ಅಭಿಪ್ರಾಯಕ್ಕಾಗಿ ಕಮಿಷನರರ ವರದಿಯನ್ನು ಸಹ ಕಳುಹಿಸಬಹುದು ಮತ್ತು ಅದರ ಮೇಲೆ ಇಂಥ ಮೊಕದ್ದಮೆಗಳಲ್ಲಿನ ತನ್ನ ಅಧಿಕಾರಗಳಿಗೆ ನ್ಯಾಯೋಚಿತವಾಗಿರುವಂಥ ಮತ್ತು ಸಂಸಂಗತವಾಗಿರುವಂಥ ಆದೇಶಗಳನ್ನು ಅಂತಿಮವಾಗಿ ಮಾಡತಕ್ಕದ್ದು.

23. "ಸರ್ಕಾರ"ದ ಪರಿಭಾಷೆ :—ಈ ಅಧಿನಿಯಮದಲ್ಲಿ "ಸರ್ಕಾರ" ಎಂದರೆ, ಕೇಂದ್ರ ಸರ್ಕಾರದ ಅಧೀನದಲ್ಲಿ ನಿಯೋಜಿತರಾಗಿರುವ ವ್ಯಕ್ತಿಗಳಿಗೆ ಸಂಬಂಧಿಸಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅಧೀನದಲ್ಲಿ ನಿಯೋಜಿತರಾಗಿರುವ ವ್ಯಕ್ತಿಗಳಿಗೆ ಸಂಬಂಧಿಸಿ ರಾಜ್ಯ ಸರ್ಕಾರ.

24. ಕೆಲವು ಅಧಿಕಾರಿಗಳ ವಜಾವಣೆಗೆ ಸಂಬಂಧಿಸಿದ ಅಧಿನಿಯಮಿತಿಗಳ ಉಳಿಸುವಿಕೆ; ಅವರ ಅಧಿವಿಚಾರಣೆಗಾಗಿ ಅಧಿನಿಯಮದ ಮೇರೆಗೆ ಕಮಿಷನ್ನು :—ಈ ಅಧಿನಿಯಮದಲ್ಲಿ ಇರುವುದು ಯಾವುದೂ, ಮುಖ್ಯ ಮತ್ತು ಇತರ ಸದರ್ ಅಮೀನರನ್ನು ಅಥವಾ ಡೆಪ್ಯೂಟಿ ಮ್ಯಾಜಿಸ್ಟ್ರೇಟರರನ್ನು ಅಥವಾ ಡೆಪ್ಯುಟಿ ಕಲೆಕ್ಟರರನ್ನು ಅವಮಾನತು ಗೊಳಿಸುವ ಅಥವಾ ವಜಾ ಮಾಡುವ ಬಗೆಗೆ ಜಾರಿಯಲ್ಲಿರುವ ಯಾವುದೇ ಅಧಿನಿಯಮವನ್ನು ಅಥವಾ ವಿನಿಯಮವನ್ನು ನಿರಸನಗೊಳಿಸುವುದಾಗಿ ಅರ್ಥೈಸತಕ್ಕದ್ದಲ್ಲ ; ಆದರೆ, ಸರ್ಕಾರವು ವಿಹಿತವೆಂದು ಆಲೋಚಿಸುವ ಯಾವುದೇ ಮೊಕದ್ದಮೆಯಲ್ಲಿ ಸದರಿ ಅಧಿಕಾರಿಗಳ ವಿರುದ್ಧವಾಗಿರುವ ಯಾವುದೇ ಆರೋಪದ ಅಧಿವಿಚಾರಣೆಗಾಗಿ, ಈ ಅಧಿನಿಯಮದ ಮೇರೆಗೆ ಕಮಿಷನನ್ನು ಹೊರಡಿಸಬಹುದು.

25. ಈ ಅಧಿನಿಯಮದ ಮೇರೆಗಿನ ವಿಚಾರಣೆಯಿಲ್ಲದೆ ತೆಗೆದು ಹಾಕುವ ಅಧಿಕಾರದ ಉಳಿಸುವಿಕೆ :—ಈ ಅಧಿನಿಯಮದಲ್ಲಿ ಇರುವುದು ಯಾವುದೂ, ಈ ಅಧಿನಿಯಮದ ಮೇರೆಗಿನ ವಿಚಾರಣೆಯಿಲ್ಲದೆ ಯಾವುದೇ ಕಾರಣಕ್ಕಾಗಿ ಯಾವನೇ ಲೋಕ ನೌಕರನನ್ನು ಅಮಾನತಿನಲ್ಲಿಡುವ ಅಥವಾ ತೆಗೆದು ಹಾಕುವ ಸರ್ಕಾರದ ಅಧಿಕಾರಕ್ಕೆ ಬಾಧಕವಾಗುತ್ತದೆಂದು ಅರ್ಥೈಸತಕ್ಕದ್ದಲ್ಲ.

The above translation in Kannada of the Public Servants (Inquiries) Act, 1850 (Act No. 37 of 1850) has been authorised by the President to be published in the Official Gazette under clause (a) of section 2 of the Authorised Translations (Central Laws) Act, 1973.

*Secretary to the Government of India.*

WD 4155